# ಕರ್ನಾಟಕ ವಿಧಾನ ಪರಿಷತ್ತು

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರು : ಶ್ರೀ ಅ. ದೇವೇಗೌಡ**

**ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 825**

**ಉತ್ತರಿಸಬೇಕಾದ ದಿನಾಂಕ : 20.09.2022**

**ಉತ್ತರಿಸಬೇಕಾದ ಸಚಿವರು : ಸಹಕಾರ ಸಚಿವರು**

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಶ್ರೀ ಗುರುರಾಘವೇಂದ್ರ ಸಹಕಾರ ಬ್ಯಾಂಕ್ ನಿಯಮಿತ, ಬಸವನಗುಡಿ, ಬೆಂಗಳೂರು ಇಲ್ಲಿ ತಮ್ಮ ಜೀವಮಾನದ ಉಳಿತಾಯದ ಹಣ ಠೇವಣಿ ಇರಿಸಿದ ಹಿರಿಯನಾಗರೀಕರು, ಬ್ಯಾಂಕ್ ಅವ್ಯವಹಾರದ ಕಾರಣ, ಠೇವಣಿ ಹಣದ ಬಡ್ಡಿಯನ್ನು ಪಡೆಯದೇ ಸಂಕಷ್ಟಕ್ಕೆ ಒಳಗಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: | ಹೌದು<br>ಬ್ಯಾಂಕಿನಲ್ಲಿ ನಡೆದಿರುವ ಅವ್ಯವಹಾರದ ಹಿನ್ನೆಲೆಯಲ್ಲಿ ಭಾರತೀಯ ರಿಸರ್ವ್ ಬ್ಯಾಂಕ್ ದಿನಾಂಕ: 10.01.2020ರಂದು ಗ್ರಾಹಕರು ತಮ್ಮ ಖಾತೆಯಿಂದ ಹಣವನ್ನು ಹಿಂಪಡೆಯುವಲ್ಲಿ ನಿರ್ಬಂಧವನ್ನು ವಿಧಿಸಿತ್ತು.<br><br>ದಿನಾಂಕ:10-01-2020ಕ್ಕೆ ಬ್ಯಾಂಕಿನಲ್ಲಿ ಒಟ್ಟು 41778 ಠೇವಣಿದಾರರಿದ್ದು, ಇವರು ರೂ.2402.17 ಕೋಟಿಗಳು ಠೇವಣಿ ಹೂಡಿರುತ್ತಾರೆ. ಈ ಪೈಕಿ ಒಟ್ಟು 32868 ಠೇವಣಿದಾರರಿಗೆ ಒಟ್ಟು ರೂ.969.72 ಕೋಟಿಗಳನ್ನು ಪಾವತಿಸಲಾಗಿರುತ್ತದೆ. (ರೂ.712 ಕೋಟಿಗಳು ಡಿಐಸಿಜಿಸಿಯಿಂದ ಮತ್ತು ರೂ.257.72 ಕೋಟಿ ಬ್ಯಾಂಕಿನಿಂದ ಪಾವತಿಸಲಾಗಿರುತ್ತದೆ).<br><br>ಉಳಿದ 8910 ಠೇವಣಿದಾರರಿಗೆ ರೂ. 1432.45 ಕೋಟಿಗಳ ಠೇವಣಿಯನ್ನು ಪಾವತಿಸ ಬೇಕಾಗಿದ್ದು, ಈ ಮೊತ್ತವನ್ನು ಆರ್.ಬಿ.ಐ. ನಿರ್ಬಂದವನ್ನು ತೆರವುಗೊಳಿಸಿದ ನಂತರ ಬ್ಯಾಂಕಿನ ಸಾಲ ವಸೂಲಾತಿ ಮತ್ತು ಮುಟ್ಟುಗೋಲು ಹಾಕಿಕೊಂಡಿರುವ ಸ್ಥಿರಾಸ್ತಿ ಗಳನ್ನು ಮಾರಾಟ ಮಾಡುವ ಮೂಲಕ ಬರುವ ಮೊತ್ತದಿಂದ ಪಾವತಿಸಲು ಕ್ರಮವಿಡಲಾಗುವುದು. |
| ಆ) | ಹಿರಿಯ ನಾಗರೀಕರ ಠೇವಣಿ ಮೇಲಿನ ಬಡ್ಡಿಯ ಆದಾಯ ತೆರಿಗೆ ಮೊದಲ ಕಂತನ್ನು ಬ್ಯಾಂಕ್ ಆದಾಯ ತೆರಿಗೆ ಇಲಾಖೆಗೆ ನೇರವಾಗಿ ಪಾವತಿಸಿದ್ದು, ಉಳಿದ ಬಾಕಿ ಆದಾಯ ತೆರಿಗೆ ಹಣವನ್ನು ಪಾವತಿಸುವಂತೆ ಆದಾಯ ತೆರಿಗೆ ಇಲಾಖೆಯು ಠೇವಣಿದಾರರಿಗೆ ಡಿಮ್ಯಾಂಡ್ ನೋಟೀಸ್ ನೀಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: | ಹೌದು, ಸರ್ಕಾರದ ಗಮನಕ್ಕೆ ಬಂದಿದೆ.<br><br>ಬ್ಯಾಂಕಿನ ಗ್ರಾಹಕರಿಗೆ ತಮ್ಮ ಖಾತೆಗಳಿಂದ ಹಣವನ್ನು ಹಿಂಪಡೆಯಲು ನಿರ್ಬಂಧವನ್ನು ವಿಧಿಸಿದೆ. ಆದರೆ ಠೇವಣಿ ಮೇಲಿನ ಬಡ್ಡಿಯನ್ನು ಠೇವಣಿದಾರರ ಖಾತೆಗೆ ಜಮಾ ಮಾಡಬೇಕಿರುತ್ತದೆ. ಈ ರೀತಿ ಜಮಾ ಮಾಡಿದ ಬಡ್ಡಿಯ ಮೇಲೆ ಆದಾಯ ತೆರಿಗೆ ಇಲಾಖೆ ಕಾಯ್ದೆಯಡಿ ಟಿ.ಡಿ.ಎಸ್. (Tax Deduction at sourceನ provisionನಂತೆ ಬ್ಯಾಂಕ್ ಅದನ್ನು ಕಟಾಯಿಸಿ ಆದಾಯ ತೆರಿಗೆ ಇಲಾಖೆಗೆ ಪಾವತಿಸಬೇಕಾಗಿರುತ್ತದೆ. |

| | | |
|---|---|---|
| ಇ) | ಠೇವಣಿಗಳ ಮೇಲಿನ ಬಡ್ಡಿಯನ್ನು ಪಡೆಯದೇ ವಂಚಿತರಾದವರಿಗೆ ಈಗ ಬಂದೊದಗಿರುವ ಸಂಕಷ್ಟಕ್ಕೆ (ಬಡ್ಡಿ ಹಣ ಪಡೆಯದೇ ತೆರಿಗೆ ಬಾಕಿ ಪಾವತಿಸಲು ಡಿಮ್ಯಾಂಡ್ ನೋಟೀಸ್ ಜಾರಿ ಮಾಡಿರುವ ಬಗ್ಗೆ) ಸರ್ಕಾರ ಯಾವ ರೀತಿಯ ಪರಿಹಾರ ಕಲ್ಪಿಸಿದೆ? | ಆದಾಯ ತೆರಿಗೆ ಪಾವತಿ ವಿಷಯವು ಕೇಂದ್ರ ಸರ್ಕಾರದ ವ್ಯಾಪ್ತಿಗೆ ಒಳಪಟ್ಟಿರುತ್ತದೆ. ಬ್ಯಾಂಕಿನ ಆಡಳಿತಾಧಿಕಾರಿಯವರಿಗೆ ತೆರಿಗೆ ಇಲಾಖಾಧಿಕಾರಿಗಳೊಂದಿಗೆ ಸಮಾಲೋಚಿಸಿ ಈ ಕುರಿತು ಸೂಕ್ತ ಕ್ರಮವಿಡಲು ಸೂಚನೆಗಳನ್ನು ನೀಡಲಾಗಿರುತ್ತದೆ. |

**ಕಡತ ಸಂಖ್ಯೆ: ಸಿಒ 107 ಸಿಆರ್‌ಸಿ 2022**

**(ಎಸ್. ಟಿ. ಸೋಮಶೇಖರ್)**
**ಸಹಕಾರ ಸಚಿವರು.**